## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ. ನಂ. 88/2025** **ಫಿರ್ಯಾ.ಸಾ -2**

**ಚಾ.ಸಾ - 3**

**ದಿನಾಂಕಃ 06.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಸುನೀಲ್ ಕುಮಾರ್ |
| ತಂದೆಯ ಹೆಸರು | : | ಕೃಷ್ಣೇಗೌಡ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಅಬಕಾರಿ ಪೇದೆ |
| ವಾಸ ಸ್ಥಳ | : | ವಿರಾಜಪೇಟೆ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

ನಾನು 11.11.2019 ರಿಂದ 30.07.2025 ರ ತನಕ ಅಬಕಾರಿ ನೀರಿಕ್ಷಕರ ಕಚೇರಿ ವಿರಾಜಪೇಟೆ ವಲಯದಲ್ಲಿ ಅಬಕಾರಿ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 22.03.2024 ರಂದು ಅಬಕಾರಿ ನೀರಿಕ್ಷಕರು ಮತ್ತು ನಾನು ಬಿರುನಾಣಿ ಗ್ರಾಮದಲ್ಲಿ ಲೋಕಸಭಾ ಚುನಾವಣೆ 2024 ನೀತಿ ಸಂಹಿತೆ ಜಾರಿಯಲ್ಲಿದ್ದು ಅಬಕಾರಿ ಗಸ್ತು ಕಾರ್ಯದಲ್ಲಿದ್ದಾಗ ಅಬಕಾರಿ ನೀರಿಕ್ಷಕರಿಗೆ ಒಂದು ಮಾಹಿತಿ ಬಂದಿದ್ದು ಚಾಸಾ 2 ರವರ ಲೈನ್ ಮನೆಯಲ್ಲಿ ವಾಸವಾಗಿರುವ ಆರೋಪಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಆ ಮಾಹಿತಿಯನ್ನು ಆಧರಿಸಿ ಪರಕಟಗೇರಿಗೆ ಹೋಗುವ ಸಮಯದಲ್ಲಿ ರಸ್ತೆಯಲ್ಲಿರುವ ವ್ಯಕ್ತಿಗಳನ್ನು ಪರಿಚಯಿಸಿಕೊಂಡು ಚಾಸಾ 2 ರವರ ಲೈನ್ ಮನೆ ವಿಳಾಸ ಕೇಳಿದಾಗ ಅವರು ಕಾಡಂಕೊಲ್ಲಿ ರಸ್ತೆಯಲ್ಲಿರುವುದಾಗಿ ತಿಳಿಸಿರುತ್ತಾರೆ. ನಂತರ ಅವರನ್ನು ಪಂಚರಾಗಿ ಬರಲು ಕೇಳಿಕೊಂಡಾಗ ಅವರು ನಿರಾಕರಿಸಿರುತ್ತಾರೆ.

ನಂತರ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿ ನಿಂತಿದ್ದು ಅವರು ಹೆಸರು ವಿಳಾಸ ಕೇಳಲಾಗಿ ಚಾಸಾ 2 ರವರು ಹೆಸರು ವಿಳಾಸ ತಿಳಿಸಿರುತ್ತಾರೆ. ಅವರಿಗೆ ವಿಚಾರ ತಿಳಿಸಿ ಆರೋಪಿ ನಿಮ್ಮ ಲೈನ್ ಮನೆಯಲ್ಲಿ ಅಕ್ರಮವಾಗಿ ಮದ್ಯ ಇಟ್ಟಿಕೊಂಡಿದ್ದು ಅದನ್ನು ಪರೀಶೀಲಿಸಲು ಚಾಸಾ 2 ರವರನ್ನು ಪಂಚರಾಗಲು ಕೋರಿಕೊಂಡಿದ್ದು ಅವರು ಒಪ್ಪಿ ನಮ್ಮ ಜೊತೆಗೆ ಬಂದಿರುತ್ತಾರೆ. ನಂತರ ಲೈನ್ ಮನೆಗೆ ಹೋದಾಗ ವ್ಯಕ್ತಿ ನಿಂತಿದ್ದು ಅವರು ಹೆಸರು ವಿಳಾಸ ಕೇಳಲಾಗಿ ಆರೋಪಿ ಅವರ ಹೆಸರು ವಿಳಾಸ ತಿಳಿಸಿರುತ್ತಾನೆ ಜೊತೆಗೆ ಪಂಚರ ಆ ವ್ಯಕ್ತಿಯನ್ನು ಆರೋಪಿ ಎಂದು ಗುರುತಿಸಿರುತ್ತಾರೆ.

ಮಾನ್ಯ ನ್ಯಾಯಾಲಯದಿಂದ ಶೋದನಾ ವಾರೆಂಟ್ ಪಡೆಯಲು ಕಾಲವಕಾಶ ಇಲ್ಲದ ಕಾರಣ ಸ್ಥಳದಲ್ಲಿ ಶೋದನಾ ವಾರೆಂಟ್ ತಯಾರಿಸಿ ಪರಿಶೀಲಿಸಿದಾಗ ಲೈನ್ ಮನೆಯ ಪ್ರವೇಶ ದ್ವಾರ ದಕ್ಷಿಣ ದಿಕ್ಕಿನಲ್ಲಿದ್ದು ಎಡಭಾಗದಲ್ಲಿ 2 ರೆಟ್ಟಿನ ಪೆಟ್ಟಿಗೆಗಳು ಕಂಡು ಬಂದಿರುತ್ತದೆ. ನಂತರ ಅದನ್ನು ಪಂಚರ ಸಮಕ್ಷಮ ತೆರೆದು ನೋಡಲಾಗ Gold winner ರೆಟ್ಟಿನ ಪೆಟ್ಟಿಗೆಯಲ್ಲಿ 90 M. L. ನ DK Whisky ಎಂಬ ಹೆಸರಿನ ಮದ್ಯ ತುಂಬಿದ 96 ಟೆಟ್ರಾ ಪ್ಯಾಕೆಟ್‌ಗಳು ಇರುವುದು ಕಂಡು ಬಂದಿರುತ್ತದೆ. ಮತ್ತೊಂದು ರೆಟ್ಟಿನ ಪೆಟ್ಟಿಗೆಯಲ್ಲಿ 330 M. L. ನ King fisher premium ಎಂಬ ಹೆಸರಿನ 15 tin bottle ಗಳು ಇರುವುದು ಕಂಡು ಬಂದಿರುತ್ತದೆ. 275 M. L. ನ Breezer Zamika Fashion ಎಂಬ ಹೆಸರಿನ 6 ಗಾಜಿನ ಬಾಟಲ್‌ಗಳು ಮತ್ತು Breezer Canberry ಎಂಬ 275 M. L. ನ ಮಧ್ಯ ತುಂಬಿದ 11 ಗಾಜಿನ ಬಾಟಲ್‌ಗಳು ಹಾಗೂ 275 M. L. ನ Breezer Orange flavour ಎಂಬ ಹೆಸರಿನ 10 ಮಧ್ಯ ತುಂಬಿದ ಗಾಜಿನ ಬಾಟಲ್‌ಗಳು ಕಂಡು ಬಂದಿರುತ್ತದೆ. ಅವುಗಳನ್ನು ಪರಿಶೀಲಿಸಿದಾಗ ಯಾವುದೇ ಅಬಕಾರಿ ಭದ್ರತಾ ಚೀಟಿಗಳು ಇರುವುದಿಲ್ಲ. ಆರೋಪಿ ಬಳಿ ಪರವಾನಗಿ ಕೇಳಲಾಗಿ ಇಲ್ಲ ಎಂದು ತಿಳಿಸಿರುತ್ತಾರೆ ಹಾಗೂ ಮಾರಾಟ ಮಾಡುವ

ಉದ್ದೇಶದಿಂದ ಇಟ್ಟುಕೊಂಡಿರುವುದಾಗಿ ತಿಳಿಸಿರುತ್ತಾರೆ. ನಂತರ ಆರೋಪಿ ಹೆಸರು ವಿಳಾಸ ತಿಳಿಸಿದ್ದು ಸ್ಥಳದಲ್ಲಿ 90 M. L. ನ DK ಎಂಬ ಹೆಸರಿನ 30 ಟೆಟ್ರಾಪ್ಯಾಕೆಟ್ ಗಳನ್ನು, 330 M. L. ನ King fisher premium ಎಂಬ ಹೆಸರಿನ 2 tin bottle ಗಳನ್ನು, 275 M. L. ನ Breezer Zamika Fashion ಎಂಬ ಹೆಸರಿನ 1 ಗಾಜಿನ ಬಾಟಲ್ ಅನ್ನು ಮತ್ತು Breezer Canberry ಎಂಬ 275 M. L. ನ ಮದ್ಯ ತುಂಬಿದ 1 ಗಾಜಿನ ಬಾಟಲ್ ಅನ್ನು ಹಾಗೂ 275 M. L. ನ Breezer Orange flavour ಎಂಬ ಹೆಸರಿನ 1 ಮದ್ಯ ತುಂಬಿದ ಗಾಜಿನ ಬಾಟಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಬಿಳಿ ಬಟ್ಟೆಯಿಂದ ಸುತ್ತಿ ಸೀಲು ಮಾಡಿ ಸ್ಥಳದಲ್ಲಿ ಪಂಚರ ಸಹಿ ಉಳ್ಳ ಮಾದರಿ ಚೀಟಿ ಅಂಟಿಸಲಾಯಿತು. ಮಹಜರ್ ಅನ್ನು 03.30 ರಿಂದ 04.30 ರ ತನಕ ಮಾಡಿರುತ್ತೇವೆ, ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಯು ನಿ ಪಿ ಶೋಧನಾ ವಾರೆಂಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ. ಪಿ 1 ಎಂದು ಗುರುತಿಸಲಾಗಿದೆ. ಸಹಿಯನ್ನು ನಿ. ಪಿ. 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ ಪಿ 2 ಮಹಜರ್ ನಲ್ಲಿ ಸಹಿ ಅನ್ನು ನೋಡಿ ಗುರುತಿಸಿದ್ದು ಸಹಿಯನ್ನು ನಿ. ಪಿ. 2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿ. ಪಿ 3 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಮು. ಮಾ 1 ರಿಂದ 6 ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಈ ಪ್ರಕರಣದಲ್ಲಿ ತನಿಖಾದಿಕಾರಿಯಾದ ಚಾಸಾ 7 ರವರು ಮೃತಪಟ್ಟಿರುತ್ತಾರೆ. ಸಾಕ್ಷಿಯು FSL ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ ಪಿ 7 ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚಾಯಿತಿ ಅಭಿವೃದ್ದಿಯವರಿಗೆ ನೀಡಿದ ಮನವಿ ಮತ್ತು ಅವರು ನೀಡಿದ ದೃಡೀಕರಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ ಪಿ 8 ಮತ್ತು 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಟಿ. ಎಂ. ಎ ವಕೀಲರಿಂದಃ**

ಈ ಪ್ರಕರಣದ ಮಾಹಿತಿ ಬಂದಾಗ ಸರ್ಕಾರಿ ಶಾಲೆ ಬಳಿ ಇದ್ದೆವು. ಈ ಸ್ಥಳದಿಂದ ಆರೋಪಿ ಮನೆ ಅಂದಾಜು 10 ಕಿ. ಮೀ. ದೂರ. ಬಿರುನಾಣಿಯ ಗ್ರಾಮಸ್ಥರು ಆರೋಪಿಯ ಸ್ಥಳ ಕಡಮ್ ಕೊಲ್ಲಿ ಹೋಂ ಸ್ಟೇ ಬಳಿ ಇದೆ ಎಂದು ಹೇಳಿರುತ್ತಾರೆ, ಅದರಂತೆ ಹುಡುಕಿಕೊಂಡು ಹೋದೆವು. ಆರೋಪಿಯ ಮನೆಯ ಸುತ್ತಲೂ ಬೇರೆ ಮನೆ ಇಲ್ಲ. ನಾವು ಹೋದಾಗ ಆರೋಪಿ ಮನೆಯಲ್ಲಿ ಒಬ್ಬನೇ ಇದ್ದ. ಆ ಮನೆ ಚಾಸಾ 2 ರವರಿಗೆ ಸೇರಿದ ಮನೆ ಆಗಿತ್ತು. ಚಾಸಾ 2 ರವರ ಮನೆ ಎಲ್ಲಿದೆಯೂ ಗೊತ್ತಿಲ್ಲ. ಆರೋಪಿ ನಮ್ಮನ್ನು ಕಂಡು ಓಡಿ ಹೋಗಲು ಪ್ರಯತ್ನ ಮಾಡಲಿಲ್ಲ. ಚುನಾವಣಾ ದಿನಾಂಕ ನೆನಪಿಲ್ಲ. ಈ ಮದ್ಯವನ್ನು ಆರೋಪಿ ಎಲ್ಲಿಂದ ತಂದ ಎಂದ ಗೊತ್ತಿಲ್ಲ. FSL ಗೆ ತೆಗೆದ ಮದ್ಯ ಖಾಲಿ ಬಾಟೆಲ್ ನ್ಯಾಯಾಲಯದಲ್ಲಿ ಈಗ ಇರುತ್ತದೆ, ಉಳಿದ ಮದ್ಯವನ್ನು ಕಚೇರಿಯಲ್ಲಿ ನಾಶಪಡಿಸಲಾಗಿರುತ್ತದೆ. ಫೋಟೋದಲ್ಲಿ 2 ಬಾಕ್ಸ್ ಇದ್ದು ನ್ಯಾಯಾಲಯದಲ್ಲಿ ಅವು ಇಲ್ಲ. ಆರೋಪಿಯ ತಂದೆ ಹೆಸರು ಬೋಜ ಎಂದು ಹೇಳಿರುತ್ತಾನೆ.

ಚಾಸಾ 1 ರವರು ಶೋಧನಾ ವಾರೆಂಟ್ ಅನ್ನು ತಯಾರಿಸಿರುತ್ತಾರೆ. ಆರೋಪಿ ಟಿ ಶೆಟ್ಟಿಗೇರಿ, ತಾವಳಗೆರೆ ಅವರ ಊರಾಗಿರುತ್ತದೆ. ಶೋಧನಾ ವಾರೆಂಟ್ ನಲ್ಲಿ ಆರೋಪಿಯ ತಂದೆ ಹೆಸರನ್ನು ನಂಜಪ್ಪ ಎಂದು ಬರೆಯಲಾಗಿರುತ್ತದೆ ಎಂದರೆ ಸರಿ, ಆದ್ದರಿಂದ ಶೋಧನಾ ವಾರೆಂಟ್ ನಲ್ಲಿ ಬರೆದಿರುವ ಆರೋಪಿಯ ಹೆಸರು ಈ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ಆರೋಪಿಯ ವಶದಲ್ಲಿ ಅಂದು ಯಾವುದೇ ಮದ್ಯ ಅಮಾನತಾಗಿಲ್ಲ ಎಂದರೆ ಸರಿಯಲ್ಲ. ಅಂಕಿ ಅಂಶಗಳಿಗೆ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಫೋಟೋದಲ್ಲಿರುವ ಮದ್ಯವನ್ನು ನಮ್ಮ ಕಚೇರಿಯಿಂದ ತೆಗೆದುಕೊಂಡು ಹೋಗಿ ಅವರ ಮನೆಯಲ್ಲಿಟ್ಟು ಸಾಕ್ಷ್ಯವನ್ನು

ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಬೇರೆ ಎಲ್ಲ ದಾಖಲೆಗಳು ಸೃಷ್ಟಿಸ ದಾಖಲೆಗಳು ಎಂದರೆ ಸರಿಯಲ್ಲ.

ಮರು ವಿಚಾರಣೆಃ **ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ